# ಕರ್ನಾಟಕ ವಿಧಾನ ಸಭೆ
# KARNATKA LEGISLATIVE ASSEMBLY

ಶುಕ್ರವಾರ ಲನೇ ಜನವರಿ ೧೯೯೩, ಪುಷ್ಯ ೧೮, ಶಕ ೧೯೧೪

ಸದನವು ವಿಧಾನಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ ೯.೨೦ ಗಂಟೆಗೆ ಸಮಾವೇಶಗೊಂಡಿತು.

ಉಪಾಧ್ಯಕ್ಷರು (ಶ್ರೀಮತಿ **ನಾಗಮ್ಮ ಸಿ. ಕೇಶವಮೂರ್ತಿ**) ಅವರು

ಪೀಠವನ್ನು ಅಲಂಕರಿಸಿದರು.

## ಚುಕ್ಕೆ ಗುರ್ತಿನ ಪ್ರಶ್ನೆಗಳಿಗೆ ಬಾಯಿ ಮಾತಿನ ಮೂಲಕ ನೀಡಲಾದ ಉತ್ತರಗಳು.

**ದಾವಣಗೆರೆ ನಗರ ಸಭೆಯನ್ನು ನಗರಪಾಲಿಕೆಯಾಗಿ ಪರಿವರ್ತನೆ.**

1090-ಶ್ರೀ ಎಂ.ವೈ. ವೀರಣ್ಣ (ದಾವಣಗೆರೆ) : ಮಾನ್ಯ ನಗರಾಭಿವೃದ್ಧಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ದಾವಣಗೆರೆ ಪುರಸಭೆಯನ್ನು ನಗರಪಾಲಿಕೆಯನ್ನಾಗಿ ಮಾಡುವ ಯೋಚನೆ ಸರ್ಕಾರಕ್ಕಿದೆಯೇ?*

*ಆ) ಇದ್ದಲ್ಲಿ ಆ ಬಗ್ಗೆ ಸರ್ಕಾರದವರು ತೆಗೆದುಕೊಂಡಿರುವ ಕ್ರಮವೇನು?*

ಶ್ರೀ ಚೌಡರೆಡ್ಡಿ (ನಗರಾಭಿವೃದ್ಧಿ ಸಚಿವರು):

ಅ) ಇದೆ.

ಆ) ಈ ಬಗ್ಗೆ ಸೂಕ್ತ ಪ್ರಸ್ತಾವನೆ ಸಲ್ಲಿಸಲು ಪೌರಾಡಳಿತ ನಿರ್ದೇಶಕರು, ಬೆಂಗಳೂರು ಇವರನ್ನು ಕೋರಲಾಗಿದೆ. ಪ್ರಸ್ತಾವನೆ ಬಂದ ನಂತರ ಪರಿಶೀಲಿಸಿ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಶ್ರೀ ವೈ.ಎಂ.ವೀರಣ್ಣ :ಮಾನ್ಯ ಅಧ್ಯಕ್ಷರೇ ಮಾನ್ಯ ಸಚಿವರು ದಾವಣಗೆರೆ ಪುರಸಭೆಯನ್ನು ನಗರಪಾಲಿಕೆಯಾಗಿ ಪರಿವರ್ತಿಸುವ ಕ್ರಮ ಇದೆ ಎಂದು ತಿಳಿಸಿದ್ದಾರೆ ಅದರೆ ಅದನ್ನು ಎಷ್ಟು ಅವಧಿಯೊಳಗೆ ಮಾಡಲು ಕ್ರಮ ತೆಗೆದುಕೊಳ್ಳುತ್ತಾರೆಂದು ತಿಳಿಸಬೇಕು. ಕಾರಣ ಈಗಾಗಲೇ ಅಲ್ಲಿಯ ಜನಸಂಖ್ಯೆ 2 ಲಕ್ಷಕ್ಕೂ ಹೆಚ್ಚು ಇದೆ. ಕರ್ನಾಟಕ ಮುನಿಸಿಪಲ್ ಕಾರ್ಪೊರೇಷನ್ ಆಕ್ಟ್ 76: ಸೆಕ್ಷನ್ 3 ರ ಪ್ರಕಾರ ನಗರಪಾಲಿಕೆ ಮಾಡುವುದಕ್ಕೆ ಎಲ್ಲಾ ರೀತಿಯ ಸೂಕ್ತ ಕ್ರಮವನ್ನು ತೆಗೆದುಕೊಳ್ಳುತ್ತೀರಾ? ಅದು ಬಹು ದಿವಸಗಳ ಬೇಡಿಕೆ, ಅದರ ಬಗ್ಗೆ ಸೂಕ್ತ ನಿರ್ಧಾರ ತಿಳಿಸಿದರೆ ಒಳ್ಳೆಯದಾಗುತ್ತದೆ.

ಶ್ರೀ ಚೌಡರೆಡ್ಡಿ : ಮಾನ್ಯ ಸದಸ್ಯರು ಆ ಸೆಕ್ಷನ್, ಎಲ್ಲಾ ವಿಚಾರಗಳನ್ನು ಆಗಲೇ ಹೇಳಿದ್ದಾರೆ, 2 ಲಕ್ಷ ಪಾಪ್ಯುಲೇಷನ್ ಇದೆ, 1 ಕೋಟಿಗಿಂತ ಹೆಚ್ಚಾಗಿ ವರಮಾನ ಇದೆ, ಅಲ್ಲಿ ನಾವು ಸಿಟಿ ಮುನಿಸಿಪಾಲಿಟಿಯನ್ನು ಕಾರ್ಪೊರೇಷನಾಗಿ

ಕನ್‌ವರ್ಟ್ ಮಾಡಬಹುದು ಎಂದು ಹೇಳಿದ್ದಾರೆ. ಪ್ರಸ್ತಾವನೆಯ ಜೊತೆಗೆ ತುಮಕೂರು, ಬಳ್ಳಾರಿ, ಕೂಡ ಸೇರಿದೆ. ಇದನ್ನು 24-8-92ರಲ್ಲಿ ಡಿ.ಸಿ.ಯವರಿಗೆ ಕಳುಹಿಸಿದ್ದೇವೆ, ಅವರು ಎಲ್ಲಾ ಫಾರ್ಮಾಲಿಟೀಸ್ ಮುಗಿಸಿ ಕಳಿಸಿಕೊಡಲಿ.

ಶ್ರೀ ವೈ.ಎಂ. ವೀರಣ್ಣ : ಪ್ರಸ್ತಾವನೆಯನ್ನು ಕಳಿಸಿಕೊಟ್ಟ ತಕ್ಷಣ ಕ್ರಮ ಕೈಗೊಳ್ಳುತ್ತಾರೇನು?

ಶ್ರೀ ಚೌಡರೆಡ್ಡಿ : ನಗರಸಭೆಯವರದೂ ಕೆಲವು ಫಾರ್ಮಾಲಿಟೀಸ್ ಇದೆ, ಅದನ್ನು ಎಷ್ಟು ಬೇಗ ಕಳಿಸಿದರೆ ನಮ್ಮ ಕಡೆಯಿಂದಂತೂ ನಿಧಾನವಾಗುವುದಿಲ್ಲ.

ಶ್ರೀ ವೈ.ಎಂ. ವೀರಣ್ಣ : ಸರ್ವಾನುಮತದಿಂದ ಠರಾವು ಮಾಡಿ ನಗರಪಾಲಿಕೆ ಮಾಡಬೇಕೆಂದು ತಮಗೆ ವಿನಂತಿಸಿಕೊಂಡಿದ್ದಾರೆ ಅದು ತಮಗೆ ಮುಟ್ಟಿದ ತಕ್ಷಣ ಕ್ರಮ ಕೈಗೊಳ್ಳುತ್ತೀರಾ?

ಶ್ರೀ ಚೌಡರೆಡ್ಡಿ : ಮುಟ್ಟಿದ ತಕ್ಷಣ ಕ್ರಮ ತೆಗೆದುಕೊಳ್ಳುತ್ತೇನೆ.

**ಕೊಡಗು ಜಿಲ್ಲೆಯಲ್ಲಿ ತೆರೆದ ಅಂಗನವಾಡಿ ಕೇಂದ್ರಗಳ ಸಂಖ್ಯೆ**

655- ಶ್ರೀಮತಿ ಸುಮಾ ವಸಂತ್ (ವೀರಾಜಪೇಟೆ): ಮಾನ್ಯ ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

*ಅ) ಕೊಡಗು ಜಿಲ್ಲೆಯಲ್ಲಿ ತೆರೆಯಲಾಗಿರುವ ಅಂಗನವಾಡಿ ಕೇಂದ್ರಗಳೆಷ್ಟು?*
(ತಾಲ್ಲೂಕುವಾರು ವಿವರ ಕೊಡುವುದು)

*ಆ) ಇದಕ್ಕಾಗಿ ಬಿಡುಗಡೆಯಾಗಿರುವ ಅನುದಾನವೆಷ್ಟು?*

*ಇ) ಅಂಗನವಾಡಿಗಳಿಗೆ ಸ್ವಂತ ಕಟ್ಟಗಳಿಲ್ಲದೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

*ಈ) ಬಂದಿದ್ದಲ್ಲಿ ಸರ್ಕಾರವು ಸ್ವಂತ ಕಟ್ಟಡಗಳನ್ನು ಕಟ್ಟಿಸುವ ಬಗ್ಗೆ ಕೈಗೊಂಡ ಕ್ರಮಗಳೇನು?*

ಶ್ರೀ ಧರ್ಮಸಿಂಗ್ (ಸಮಾಜ ಕಲ್ಯಾಣ ಸಚಿವರು):

ಅ) 559 ಅಂಗನವಾಡಿ ಕೇಂದ್ರಗಳು

| | | |
|---|---|---|
| 1) ಪೊನ್ನಂಪೇಟೆ | 257 | ಅಂಗನವಾಡಿ ಕೇಂದ್ರಗಳು |
| 2) ಮಡಿಕೇರಿ | 202 | ಅಂಗನವಾಡಿ ಕೇಂದ್ರಗಳು |
| 3) ಸೋಮವಾರಪೇಟೆ | 100 | ಅಂಗನವಾಡಿ ಕೇಂದ್ರಗಳು |
| ಒಟ್ಟು | 559 | ಅಂಗನವಾಡಿ ಕೇಂದ್ರಗಳು |

ಆ) ರೂ. 130.80 ಲಕ್ಷಗಳು

ಇ) ಹೌದು.

ಈ) ಸ್ವಂತ ಕಟ್ಟಡಗಳನ್ನು ಕಟ್ಟಿಸಲು ಈ ಜಿಲ್ಲೆಗೆ 1992Ë93 ನೇ ಸಾಲಿನಲ್ಲಿ ರೂ. 10ಲಕ್ಷವನ್ನು ಆಯವ್ಯಯದಲ್ಲಿ ಒದಗಿಸಲಾಗಿದೆ. ಲಭ್ಯವಾಗುವ ಸಂಪನ್ಮೂಲಗಳನ್ನು ಅನುಸರಿಸಿ ಕಟ್ಟಡಗಳನ್ನು ಹಂತ ಹಂತವಾಗಿ ಕಟ್ಟಿಸಲು ಸಾಧ್ಯವಾಗುವುದು.

ಶ್ರೀಮತಿ ಸುಮಾ ವಸಂತ್ : ಪೊನ್ನಂಪೇಟೆ ಅಂದರೆ ಅದು ವಿರಾಜಪೇಟೆ ಕ್ಷೇತ್ರಕ್ಕೆ ಬರುತ್ತದೆ. 257 ಅಂಗನವಾಡಿ ಕೇಂದ್ರಗಳಿವೆ ಎಂದಿದ್ದಾರೆ. ಇವುಗಳಲ್ಲಿ